ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ಮಕ್ಕಳಿಗೆ ಹಾಕುವ ಲಸಿಕೆಗಳ ಕೊರತೆ ಉಂಟಾಗಿರುವ ಕುರಿತು

ಶ್ರೀ ಸುನೀಲ್ ಗೌಡ ಬಸನಗೌಡ (ಸ್ಥಳೀಯಸಂಸ್ಥೆಗಳಕ್ಷೇತ್ರ):-

1503 (1726) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮಕ್ಕಳಿಗೆ (ವಯಸ್ಸು 0-5) ಹಾಕುವ ಲಸಿಕೆಗಳ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಯಾವ ಯಾವ ಲಸಿಕೆಗಳ ಕೊರತೆ ಉಂಟಾಗಿದೆ ; (ಜಿಲ್ಲಾವಾರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳವಾರು ದಾಸ್ತಾನು ವಿವರ ನೀಡುವುದು)

(ಇ) ಮುಖ್ಯವಾಗಿ ಐ.ಪಿ.ವಿ ಲಸಿಕೆಯ ಕೊರತೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಲಸಿಕೆಯ ದಾಸ್ತಾನು ಮತ್ತು ಲಭ್ಯತೆಯ ವಿವರಗಳನ್ನು ಜಿಲ್ಲಾವಾರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರವಾರು ವಿವರ ನೀಡುವುದು ;

(ಈ) ಕೊರತೆ ಉಂಟಾಗಿರುವ ಲಸಿಕೆಗಳನ್ನು ಪೂರೈಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಉ) ಹಾಗಿದ್ದಲ್ಲಿ, ಕೊರತೆ ಉಂಟಾಗಿರುವ ಲಸಿಕೆಗಳನ್ನು ಎಷ್ಟು ದಿನಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೂರೈಸಲಾಗುವುದು ?